

# ಆಧುನಿಕ ಕರ್ನಾಟಕದ ಮುನ್ನುಡಿಕಾರ

ಸರ್ ಎಂ. ವಿಶ್ವೇಶ್ವರಯ್ಯ (1860–1962) ಕರ್ನಾಟಕ ಕಂಡ ಅಪ್ರತಿಮ ಆಡಳಿತಗಾರರಲ್ಲೊಬ್ಬರು. ಶೈಕ್ಷಣಿಕವಾಗಿ ಹಾಗೂ ಔದ್ಯಮಿಕವಾಗಿ 'ಆಧುನಿಕ ಕರ್ನಾಟಕ'ದ ಕನಸು ಕಂಡು, ಅದರ ಸಾಕಾರಕ್ಕಾಗಿ ಮೈಸೂರು ಅರಸರೊಂದಿಗೆ ಹಲವು ಯೋಜನೆಗಳಿಗೆ ಮುನ್ನುಡಿ ಬರೆದರು. ಸೆ. 15ರ ಸರ್ ಎಂ.ವಿ. ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಸಾಧನೆಯ ಬದುಕಿನ ಕೆಲವು ನೆನಪುಗಳು.

■ ಎನ್‌. ಜಗನ್ನಾಥ ಪ್ರಕಾಶ್

ಭಾರತದಲ್ಲಿ ಟೆಲಿವಿಷನ್ (ದೂರದರ್ಶನ) ಪ್ರಸಾರ ಶುರುವಾಗಿದ್ದು 1950ರ ದಶಕದಲ್ಲಿ. ಆಗಲೇ ದೇಶದ ಹಲವೆಡೆ ದೂರದರ್ಶನ ಕೇಂದ್ರಗಳು ಕಾರ್ಯಾರಂಭಗೊಂಡವು. ಭಾರತದಲ್ಲಿದ್ದ ಬಹುತೇಕ ಎಲ್ಲ ದೂರದರ್ಶನ ಕೇಂದ್ರಗಳಲ್ಲಿ, ಬೆಂಗಳೂರಿನ 'ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್'ನಲ್ಲಿ (ಎಸ್‌ಜೆಪಿಯಲ್ಲಿ) ವ್ಯಾಸಂಗ ಮಾಡಿದ ಛಾಯಾಗ್ರಾಹಕರು ಒಬ್ಬರಾದರೂ ಇದ್ದರು. ಇಂತಹ ದೂರದೃಷ್ಟಿಯ ತಾಂತ್ರಿಕ ಶಿಕ್ಷಣವನ್ನು ನಮ್ಮಲ್ಲಿ ಸಿಗುವಂತೆ ಮಾಡಿದ್ದು ಎಂ. ವಿಶ್ವೇಶ್ವರಯ್ಯನವರು.

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಹಳಿ ತಪ್ಪಿದ್ದ ಸಂದರ್ಭದಲ್ಲಿ ಮೈಸೂರು ಅರಸರು ಅದನ್ನು ಸರಿದಾರಿಗೆ ತರುವ ಹೊಣೆಯನ್ನು ವಿಶ್ವೇಶ್ವರಯ್ಯ ಅವರಿಗೆ ಹೊರಿಸಿದ್ದರು. ಸುಮಾರು ಆರು ವರ್ಷ ಶ್ರಮಪಟ್ಟು ಕಾರ್ಖಾನೆಯನ್ನು ಮತ್ತೆ ಲಾಭದತ್ತ ತಂದ ಸರ್ ಎಂ.ವಿ. ಅವರಿಗೆ ಅರಸರು 2 ಲಕ್ಷ ರೂಪಾಯಿ ಗೌರವಧನ ಕೊಟ್ಟರು. ಅದನ್ನು ಸ್ವಂತಕ್ಕೆ ಬಳಸಿಕೊಳ್ಳದೆ, ಅದೇ ಹಣವನ್ನು ಬೆಂಗಳೂರಿನಲ್ಲಿ ತಾಂತ್ರಿಕ ಶಾಲೆಯೊಂದನ್ನು ಆರಂಭಿಸಲು ಅರಸರಿಗೆ ಅಹವಾಲು ಕೊಟ್ಟರು ವಿಶ್ವೇಶ್ವರಯ್ಯ. ಆ ಕೋರಿಕೆಯ ಮೇರೆಗೆ ಮಹಾರಾಜರು, ಛಾಯಾಗ್ರಹಣ ಸೇರಿದಂತೆ ಹಲವು ತಾಂತ್ರಿಕ ಶಿಸ್ತುಗಳನ್ನು ಕಲಿಸುವ ತಾಂತ್ರಿಕ ಶಿಕ್ಷಣ ಶಾಲೆಯೊಂದನ್ನು ಸ್ಥಾಪಿಸಿದರು. ಅದೇ ಇಂದು ಏಷ್ಯಾದಲ್ಲೇ ಹೆಸರುವಾಸಿಯಾಗಿರುವ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್. ಇಲ್ಲಿ ಕಲಿತವರು ದೇಶವಿದೇಶಗಳಲ್ಲಿ ಛಾಯಾಗ್ರಾಹಕರಾಗಿ ಪ್ರಸಿದ್ಧರಾಗಿದ್ದಾರೆ. ಪ್ರತಿಷ್ಠಿತ ಫಾಲ್ಕೆ ಪ್ರಶಸ್ತಿ ಪಡೆದ ವಿ.ಕೆ. ಮೂರ್ತಿಯವರೂ ಇಲ್ಲಿಯ ವಿದ್ಯಾರ್ಥಿ. ನಿರ್ದೇಶಕ ಛಾಯಾಗ್ರಾಹಕರಾಗಿ ಪ್ರಖ್ಯಾತರಾಗಿರುವ ಗೋವಿಂದ ನಿಹಲಾನಿ ಅವರೂ ಇಲ್ಲೇ ಕ್ಯಾಮೆರಾ ತಂತ್ರಜ್ಞಾನ ಗಳಿಸಿದವರು!

ಎಸ್‌ಜೆಪಿ ಮಾತ್ರವಲ್ಲ, ಹಲವಾರು ದೂರದೃಷ್ಟಿಯ ಯೋಜನೆಗಳನ್ನು ಈ ನೆಲದಲ್ಲಿ ಬಿತ್ತಿದ ಕೀರ್ತಿ ಸಲ್ಲಬೇಕಾದದ್ದು ಸರ್ ಎಂ.ವಿ. ಅವರಿಗೆ.

ಅವಿಭಜಿತ ಕೋಲಾರ ಜಿಲ್ಲೆಯ (ಈಗ ಚಿಕ್ಕಬಳ್ಳಾಪುರ ಜಿಲ್ಲೆ) ನಂದಿ ಗಿರಿಧಾಮದ ಸನಿಹದ ಮುದ್ದೇನಹಳ್ಳಿಯ ಬಡ ಕುಟುಂಬದಲ್ಲಿ ಜನಿಸಿ, ಲೈಟು ಕಂಬದ ಬೆಳಕಿನಲ್ಲೇ ಓದಿಕೊಂಡು, ಚಿಕ್ಕಬಳ್ಳಾಪುರ, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ, ಪುಣೆಯ ಸೈನ್ಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿಗಳಿಸಿದಾಗ ಸರ್. ಎಂ.ವಿ. ಅವರಿಗೆ 23 ವರ್ಷ.

ಪುಟ್ಟಹಳ್ಳಿಯಲ್ಲಿ ಹುಟ್ಟಿ ದೇಶವಿದೇಶಗಳನ್ನು ಸುತ್ತಿ ಬಂದರೂ ನಮ್ಮ ದೇಶವನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ವಿಶ್ವೇಶ್ವರಯ್ಯನವರು ಭಾರತೀಯ ಕೈಗಾರಿಕಾ ಇತಿಹಾಸದಲ್ಲಿ ತಾಯ್ನಾಡು ಕರ್ನಾಟಕಕ್ಕೆ ಮಹತ್ವದ ಸ್ಥಾನವನ್ನು ಗಳಿಸಿಕೊಟ್ಟಿದ್ದು ಉಲ್ಲೇಖಾರ್ಹ.